| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 900(1092) |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) ವಿಧಾನ ಪರಿಷತ್ತಿನ ಸದಸ್ಯರು. |
| ವಿಷಯ | ಗೊಲ್ಲರಹಟ್ಟಿ, ತಾಂಡ ಮತ್ತು ವಡ್ಡರಹಟ್ಟಿ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಬಗ್ಗೆ. |
| ಉತ್ತರಿಸಬೇಕಾದ ದಿನಾಂಕ | 20/08/2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೊಲ್ಲರಹಟ್ಟಿಗಳು, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳಲ್ಲಿ ವಾಸಿಸುವ ಕಾಡುಗೊಲ್ಲರು/ಗೊಲ್ಲರು/ಲಂಬಾಣಿಯರು ಸಾಮಾಜಿಕವಾಗಿ-ಶೈಕ್ಷಣಿಕವಾಗಿ-ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತೀ ಹಿಂದುಳಿದಿದ್ದು, ಈ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸದೇ ಇರುವುದರಿಂದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಇರುವ ಅರ್ಹ ದಾಖಲೆರಹಿತ ಗೊಲ್ಲರಹಟ್ಟಿಗಳನ್ನು, ತಾಂಡಾಗಳನ್ನು ಮತ್ತು ವಡ್ಡರಹಟ್ಟಿಗಳನ್ನು ನಿಯಮಾನುಸಾರ ಹೊಸ ಕಂದಾಯ ಗ್ರಾಮಗಳನ್ನಾಗಿ/ಉಪಗ್ರಾಮಗಳನ್ನಾಗಿ ಘೋಷಿಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಗೊಲ್ಲರಹಟ್ಟಿಗಳು, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |
| ಇ) | ಸದರಿ ಗ್ರಾಮಗಳು ಗ್ರಾಮಠಾಣ ವ್ಯಾಪ್ತಿಯಲ್ಲಿದ್ದರೂ ಸಹ ಪ್ರತ್ಯೇಕವಾಗಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅರ್ಹ ದಾಖಲೆರಹಿತ ಗೊಲ್ಲರಹಟ್ಟಿಗಳನ್ನು, ತಾಂಡಾಗಳನ್ನು ಮತ್ತು ವಡ್ಡರಹಟ್ಟಿಗಳನ್ನು ನಿಯಮಾನುಸಾರ ಗ್ರಾಮಠಾಣಾದ ಭಾಗವನ್ನಾಗಿ ಘೋಷಣೆ ಮಾಡಿ, ಅಲ್ಲಿ ವಾಸಿಸುತ್ತಿರುವ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಹಕ್ಕುಪತ್ರಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿ ಇರುತ್ತದೆ. |
| ಈ) | ಗೊಲ್ಲರ ಹಟ್ಟಿಗಳು, ತಾಂಡಗಳು ಮತ್ತು ವಡ್ಡರಹಟ್ಟಿ ಗ್ರಾಮಗಳು ಗ್ರಾಮಠಾಣ ವ್ಯಾಪ್ತಿಯಲ್ಲಿದ್ದರೂ ಸಹ ಪ್ರತ್ಯೇಕವಾಗಿ ಇರುವುದರಿಂದ ಸುತ್ತೋಲೆ ಸಂಖ್ಯೆ: ಕಂಇ:20;ಸಿಸಿಆರ್‌ವಿ:2019, ದಿನಾಂಕ:15.10.2019ರ ನಿಯಮಾವಳಿಗಳನ್ನು ಪಾಲಿಸಿ ಕಂದಾಯ ಗ್ರಾಮಗಳನ್ನಾಗಿ ಘೋಷಿಸುವುದು ಕಷ್ಟ ಸಾಧ್ಯವಾಗುತ್ತಿರುವುದರಿಂದ ಸದರಿ ನಿಯಮಾವಳಿಗಳಲ್ಲಿ ಅಲ್ಪ ಮಟ್ಟದ ಸಡಿಲಿಕೆ ನೀಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ? | |

ಸಂಖ್ಯೆ : RC-CFS0ADMN/237/2024 (ಇ – 1322625 )

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು